# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 436 |
| ಸದಸ್ಯರ ಹೆಸರು | : ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 12.12.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಯು.ಕೆ.ಪಿ ಹಂತ 3ಕ್ಕೆ ಸಂಬಂಧಿಸಿದಂತೆ ಎಫ್.ಆರ್.ಎಲ್ 519.6 ರಿಂದ 524.256 ಮೀಟರ್‌ಗಳವರೆಗೆ ಮುಳುಗಡೆ ಹೊಂದುವ 75,563 ಎಕರೆ ಕ್ಷೇತ್ರದ ಜಮೀನುಗಳನ್ನು 2 ಹಂತಗಳಲ್ಲಿ ಭೂಸ್ವಾಧೀನಕ್ಕೆ ಒಳಪಡಿಸಲು ತೀರ್ಮಾನಿಸಿ, ಮೊದಲನೆಯದಾಗಿ ಆರ್.ಎಲ್ 519.6 ರಿಂದ 522 ರವರೆಗೆ ಮಾತ್ರ ಮುಳುಗಡೆಯಾಗುವ 38,983 ಎಕರೆ ಭೂಸ್ವಾಧೀನ ಮತ್ತು ಬಾಕಿ ಉಳಿದ 38,580 ಎಕರೆ ಜಮೀನನ್ನು ಮುಂದಿನ ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಡಿಸುವ ತೀರ್ಮಾನ ಮಾಡಿರುವುದು ನಿಜವೇ; | ದಿನಾಂಕ: 12.08.2022 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಸಂಬಂಧಿಸಿದಂತೆ, ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ಭೂಪರಿಹಾರ ದರ ನಿಗದಿಪಡಿಸುವ ಕುರಿತು ಸಚಿವ ಸಂಪುಟದ ಉಪ ಸಮಿತಿ ಸಭೆಯು 188 ಗ್ರಾಮಗಳಿಗೆ ಸಂಬಂಧಿಸಿದಂತೆ ಮುಳುಗಡೆ ಹೊಂದಲಿರುವ 75,563 ಎಕರೆ ಜಮೀನು ಕ್ಷೇತ್ರವನ್ನು *ಏಕ ಕಾಲಕ್ಕೆ ಭೂಸ್ವಾಧೀನಕ್ಕೆ ಒಳಪಡಿಸುವ ಬದಲಾಗಿ 02 ಹಂತದಲ್ಲಿ ಅಂದರೆ, (1) ಆರ್. ಎಲ್. 519.600 ರಿಂದ 522.00 ಮೀ. ವರೆಗೆ ಮತ್ತು (2) ಆರ್.ಎಲ್. 522.00ಮೀ. ರಿಂದ 524.256 ಮೀ. ವರೆಗೆ ಭೂಸ್ವಾಧೀನಕ್ಕೆ ಒಳಪಡಿಸಲು ಸಮಿತಿಯು ತೀರ್ಮಾನಿಸಿರುತ್ತದೆ.*<br>ಸದರಿ ಸಮಿತಿಯ ನಡವಳಿಯು ಕೃಷ್ಣಾ ಭಾಗ್ಯ ಜಲ ನಿಗಮದ ಮಂಡಳಿಯ 140ನೇ ಸಭೆಯಲ್ಲಿ ಚರ್ಚಿಸಲ್ಪಟ್ಟು ಅನುಮೋದನೆಯಾಗಿರುತ್ತದೆ. |
| ಆ) | ಈ ಹಿನ್ನಲೆಯಲ್ಲಿ ಭೂಸ್ವಾಧೀನ ಕಾಯ್ದೆ ಕಲಂ 11(1) ಅಧಿಸೂಚನೆ ನಂತರದ 19(1) ಅಧಿಸೂಚನೆಗಳನ್ನು ಕೂಡ ಅನೇಕ ಜಮೀನುಗಳ ಮಾಲೀಕರಿಗೆ ನೀಡಲಾಗಿದೆಯೇ; | ಎಫ್.ಆರ್.ಎಲ್.519.60ಮೀ. ರಿಂದ 524.256ಮೀ. ಅಡಿ ಮುಳುಗಡೆಯಾಗದ 79 ಗ್ರಾಮಗಳ 29568ಎ-05ಗುಂ. ಕ್ಷೇತ್ರಕ್ಕೆ ಭೂಸ್ವಾಧೀನ ಕಾಯ್ದೆ 2013ರ ಕಲಂ 11(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.<br>ಈ ಪೈಕಿ 22 ಗ್ರಾಮಗಳ 4965ಎ-06ಗುಂ. ಕ್ಷೇತ್ರಕ್ಕೆ ಕಲಂ 19(1) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. |
| ಇ) | ಭೂಸ್ವಾಧೀನ ಕಾಯ್ದೆ ಕಲಂ 11(1)ರ ಪ್ರಕಟಣೆಯ ನಂತರ ಜಮೀನು ಮಾಲೀಕರು ಅದಕ್ಕೆ ಒಳಪಟ್ಟ ಕ್ಷೇತ್ರದಲ್ಲಿ ಯಾವುದೇ ಸುಧಾರಣೆ, ಅಭಿವೃದ್ಧಿ ಚಟುವಟಿಕೆ ಮಾಡಕೂಡದೆಂಬ ಕಟ್ಟಳೆಗಳನ್ನು ನೋಟೀಸಿನ ಒಂದು ಭಾಗವಾಗಿರುವುದು ಸರ್ಕಾರದ ಗಮನದಲ್ಲಿದೆಯೇ; | ಭೂಸ್ವಾಧೀನ ಕಾಯ್ದೆ ಕಲಂ 11(4) ರನ್ವಯ "ಅಧಿಸೂಚನೆ ಪ್ರಾರಂಭಿಸಿದ ದಿನಾಂಕದಿಂದ ಈ ಆಧ್ಯಾಯದ ಮೇರೆಗಿನ ವ್ಯವಹರಣೆಗಳು ಪೂರ್ಣಗೊಳ್ಳುವ ಕಾಲದ ತನಕ ಯಾರೇ ವ್ಯಕ್ತಿಯು, ಪ್ರಾರಂಭಿಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಯ ಬಗ್ಗೆ ಯಾವುದೇ ವ್ಯವಹಾರವನ್ನು ಮಾಡತಕ್ಕದ್ದಲ್ಲ ಅಥವಾ ಮಾಡಿಸತಕ್ಕದ್ದಲ್ಲ ಅಥವಾ ಅಂಥ ಭೂಮಿಯ ಮೇಲೆ ಯಾವುದೇ ಋಣಭಾರಗಳನ್ನು ಸೃಜಿಸತಕ್ಕದ್ದಲ್ಲ" ಎಂಬುದು ಅಧಿನಿಯಮದ ಭಾಗವಾಗಿರುತ್ತದೆ.<br>ಪರಂತು, ಕಲೆಕ್ಟರನು ಹಾಗೆ ಅಧಿಸೂಚಿಸಿದ ಭೂಮಿಯ ಒಡೆಯನಿಂದ ಮಾಡಿದ ಅರ್ಜಿಯ ಮೇಲೆ ಬರಹದಲ್ಲಿ ದಾಖಲಿಸುವ ಮೂಲಕ ವಿಶೇಷ ಸಂದರ್ಭಗಳಲ್ಲಿ ಈ |

| | | |
|---|---|---|
| | | ಉಪ–ಪ್ರಕರಣದ ಜಾರಿಯಿಂದ ಅಂಥ ಒಡೆಯನಿಗೆ ವಿನಾಯತಿ ಕೊಡಬಹುದು.<br><br>ಮತ್ತು ಪರಂತು, ಈ ಉಪಬಂಧದ ಅವನ ಉದ್ದೇಶಪೂರ್ವಕ ಉಲ್ಲಂಘನೆಯ ಕಾರಣದಿಂದ ಯಾವನೇ ವ್ಯಕ್ತಿಯು ಅನುಭವಿಸಿದ ಯಾವುದೇ ನಷ್ಟ ಅಥವಾ ಹಾನಿಯು ಕಲೆಕ್ಟರನಿಂದ ಮಾಡತಕ್ಕದ್ದಲ್ಲ" ಎಂದು ಇರುತ್ತದೆ. |
| ಈ) | ಈ ಭೂಸ್ವಾಧೀನ ಕಾಯ್ದೆ ಕಲಂ 11(1), 19(1) ಜಾರಿಯಾದ ಪ್ರಕರಣಗಳ ಪ್ರಕ್ರಿಯೆ ಅರ್ಧಕ್ಕೆ ನಿಲ್ಲಿಸಿ, ಅನೇಕ ಪ್ರಸ್ತಾವನೆಗಳನ್ನು ರದ್ದುಪಡಿಸಿದ್ದು, ಇದರಿಂದ ಜಮೀನು ಅಭಿವೃದ್ಧಿಪಡಿಸಿ ಹೆಚ್ಚಿನ ಆದಾಯ ಪಡೆಯಬೇಕೆಂದುಕೊಂಡಿದ್ದ ರೈತರಿಗೆ ತುಂಬಲಾರದ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಭೂಸ್ವಾಧೀನ ಪ್ರಸ್ತಾವನೆ ರದ್ದುಪಡಿಸಿದ ಜಮೀನುಗಳ ಮಾಲೀಕರಿಗೆ ನಷ್ಟ ಪರಿಹಾರ ನೀಡಲಾಗುವುದೇ? | ಸಚಿವ ಸಂಪುಟದ ಉಪ ಸಮಿತಿಯ ತೀರ್ಮಾನ ಹಾಗೂ ನಿಗಮದ ಮಂಡಳಿಯ ಅನುಮೋದನೆಯಂತೆ ಆಲಮಟ್ಟಿ ಹಿನ್ನಿರಿನ 519.60 ಮೀ. ರಿಂದ 524.256 ಮೀ. ವರೆಗೆ ಮುಳುಗಡೆಯಾಗಲಿರುವ ಜಮೀನುಗಳನ್ನು 02 ಹಂತದಲ್ಲಿ ಅಂದರೆ, (1) 519.60 ಮೀ. ರಿಂದ 522.00 ಮೀ. ಮತ್ತು (2) 522.00 ಮೀ. ರಿಂದ 524.256 ಮೀ. ವರೆಗೆ ಭೂಸ್ವಾಧೀನಪಡಿಸಿಕೊಳ್ಳುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.<br>ಹೊಸ ಭೂಸ್ವಾಧೀನ ಕಾಯ್ದೆ 2013ರ ಕಲಂ 11(4) ರನ್ವಯ ಭೂಸ್ವಾಧೀನ ಪ್ರಕ್ರಿಯೆಯನ್ನು ಜಾರಿಯಲ್ಲಿಡಲಾಗಿದೆ. |

ಸಂಖ್ಯೆ: ಜಸಂಇ 84 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು